ಒ ಎಸ್ 36/2024 ಪಿ.ಡಬ್ಲ್ಯೂ 1

ಇಂದು ದಿಃ 23.07.2025 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎನ್ ಎಂ ವಕೀಲರಿಂದಃ

ದಾವಾ ಆಸ್ತಿಯನ್ನು ನನ್ನ ತಂದೆ ಕ್ರಯಕ್ಕೆ 1973ರಲ್ಲಿ ನನ್ನ ಚಿಕ್ಕಪ್ಪ ಸೋಮಪ್ಪನಿಂದ ಖರೀದಿಸಿದ್ದರು. ಕ್ರಯಕ್ಕೆ ತೆಗೆದುಕೊಂಡ ಸಮಯದಲ್ಲಿ ಸರ್ವೆ ನಂ. 22/1 22/2 ಎಂದು ಇತ್ತು. ನನ್ನ ಚಿಕ್ಕಪ್ಪನಾದ ಸೋಮಪ್ಪನಿಗೆ ದಾವಾ ಆಸ್ತಿ ಹೇಗೆ ಬಂತು ಎಂದು ನನಗೆ ಮಾಹಿತಿ ಇಲ್ಲ. ನನ್ನ ಚಿಕ್ಕಪ್ಪ ಬೇರೆಯವರಿಂದ ಖರೀದಿಸಿದಾಗ ಆ ಸರ್ವೆ ನಂ 1 ಎಂದು ಇತ್ತು ಎಂದರೆ ನನಗೆ ಗೊತ್ತಿಲ್ಲ. 1973ರಲ್ಲಿ ನನ್ನ ತಂದೆ ಕ್ರಯಕ್ಕೆ ಖರೀದಿಸಿದ್ದರು ಎಂದು ತೋರಿಸಲು ಕ್ರಯ ಪತ್ರ ಹಾಜರುಪಡಿಸಲು ತೊಂದರೆ ಇಲ್ಲ. ನನ್ನ ತಂದೆಯ ಹೆಸರಿನಲ್ಲಿದ್ದ ಖಾತೆ ಆರ್ ಟಿ ಸಿ ಹಾಜರುಪಡಿಸಲು ತೊಂದರೆ ಇಲ್ಲ. 1973ರಲ್ಲಿ ದಾವಾ ಆಸ್ತಿಯನ್ನು ಖರೀದಿಸುವಾಗ ಅಳತೆ ಮಾಡಿ ಖರೀದಿಸಿಲ್ಲ, ಆದರೆ ಹದ್ದುಬಸ್ತು ಕಲ್ಲು ಇತ್ತು ಅದರ ಆಧಾರದಲ್ಲಿ ತೆವರು ಹಾಕಿಕೊಂಡಿದ್ದೆವು ಎನ್ನುತ್ತಾರೆ. ತೆವರು ಜಾಗದಲ್ಲಿ ಈಗ ತಂತಿ ಬೇಲಿ ಹಾಕಿದ್ದೇವೆ ಎಂದರೆ ಸರಿಯಲ್ಲ. ತಂತಿ ಬೇಲಿ ಇದ್ದರೂ ಸಹ ಇಲ್ಲ ಈ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಇತ್ತೀಚೆಗೆ ಪ್ರತಿವಾದಿಗಳು ಅವರ ಆಸ್ತಿಗೆ ತಂತಿ ಬೇಲಿ ಹಾಕಿಸಿಕೊಂಡಿದ್ದಾರೆ. ನಮ್ಮಿಬ್ಬರ ಆಸ್ತಿ ನಡುವೆ ರಸ್ತೆ ಇದೆ ಎಂದರೆ ಸರಿಯಲ್ಲ. ಸರ್ವೆ ನಂ. 1 ರಲ್ಲಿ 300 ಎಕರೆ ಆಸ್ತಿ ಇದೆ ಎಂದರೆ ಸರಿ. ನಮ್ಮಿಬ್ಬರ ಆಸ್ತಿ ನಡುವೆ ಸರ್ವೆ ನಂಬರ್ 1 ರ ಮದ್ಯೆ ಸುಮಾರು 50 ವರ್ಷಗಳಿಂದ ಒಂದು ರಸ್ತೆ ಇದ್ದು ಅಕ್ಕಪಕ್ಕದವರು ಅದನ್ನು ಉಪಯೋಗಿಸುತ್ತಿದ್ದಾರೆ ಎಂದರೆ ಸುಳ್ಳು. ಆ ರಸ್ತೆ ಮುಂದಕ್ಕೆ ಮುಳ್ಳೂರು ಹುಂಡಿ ಗ್ರಾಮಕ್ಕೆ ರಸ್ತೆ ಕಲ್ಪಿಸುತ್ತದೆ ಎಂದರೆ ಸುಳ್ಳು. ಸುಮಾರು 50-60 ವರ್ಷಗಳಿಂದ ಅದೇ ರಸ್ತೆಯನ್ನು ಮುಳ್ಳೂರು ಮತ್ತು ಮುಳ್ಳೂರು ಹುಂಡಿ ಗ್ರಾಮದವರು ಓಡಾಡಲು ಉಪಯೋಗಿಸುತ್ತಿದ್ದಾರೆ ಎಂದರೆ ಸುಳ್ಳು. ಆ ರಸ್ತೆ ಬಸವೇಶ್ವರ ದೇವಸ್ಥಾನದ ಪಕ್ಕ ಬಂದು ಸೇರುತ್ತದೆ ಎಂದರೆ ಸುಳ್ಳು. ಆ ಊರಿನ ಅಕ್ಕ ಪಕ್ಕದವರು ಸಾಮಾನ್ಯವಾಗಿ ಅಳತೆ ಮಾಡದೇ ಜಮೀನನ್ನು ಖರೀದಿಸಿದ್ದರು ಎಂದರೆ ಸರಿ.

2 ವರ್ಷಗಳ ಹಿಂದೆ ದಾವಾ 2ನೇ ಅನುಕ್ರಮ ಆಸ್ತಿಯನ್ನು ಒತ್ತುವರಿ ಮಾಡಿದ್ದಾರೆ ಎಂದು ತಿಳಿಯಿತು. ಪ್ರತಿವಾದಿಗಳು ಯಾವುದೇ ರೀತಿಯಲ್ಲಿ ಒತ್ತುವರಿ ಮಾಡಿಲ್ಲ, 1982ರ ಪೂರ್ವದಿಂದಲೂ ಪ್ರತಿವಾದಿಗಳು ಅಲ್ಲಿ ವಾಸ ಇರುವ ವಿಚಾರ ನನಗೆ ಮತ್ತು ನನ್ನ ತಂದೆಗೆ ತಿಳಿದಿದ್ದರೂ ಸಹ ಒತ್ತುವರಿ ಮಾಡಿದ್ದಾರೆ ಎಂದು ಈ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳ ಪೂರ್ವ ಮಾಲಿಕರು ಪೂರ್ವದಿಂದಲೂ ಬಿ ಅನುಸೂಚಿತ ಆಸ್ತಿಯನ್ನು ಸ್ವಾಧೀನ ಹೊಂದಿದ್ದರು ಎಂದರೆ ಸರಿಯಲ್ಲ. ಈ ಎಲ್ಲಾ ವಿವರಗಳು ತಿಳಿದಿದ್ದರೂ ಸಹ ಪ್ರತಿವಾದಿಗಳಿಗೆ ತೊಂದರೆ ನೀಡಲು ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಂದೆಯ ಪೂರ್ವ ಮಾಲಿಕರಿಗೂ ಸಹ ಬಿ ಅನುಸೂಚಿತ ಆಸ್ತಿಯಲ್ಲಿ ಸ್ವಾಧೀನ ಇಲ್ಲದ ಕಾರಣ ಆ ಆಸ್ತಿಯಲ್ಲಿ ನಾನು

ಪರಿಹಾರ ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಖರೀದಿಸಿದ ಆಸ್ತಿಯ ಪೂರ್ವದ ಮಾಲೀಕರು ಸ್ವಾದೀನದಲ್ಲಿ ಆಸ್ತಿಯ ವಿಸ್ತೀರ್ಣವನ್ನು ಮಾತ್ರ ಕೊಟ್ಟಿದ್ದರು. ನನ್ನ ತಂದೆ ಖರೀದಿಸದ ಕಾರಣ ದಾವಾ ಆಸ್ತಿಯ ವಿಸ್ತೀರ್ಣ ಗೊತ್ತಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ಎರಡು ಭಾವಚಿತ್ರವನ್ನು ತೋರಿಸಿದ್ದು ಅದು ನಮ್ಮ ಊರಿನ ಬಸವೇಶ್ವರ ಗುಡಿ ಎಂದು ಒಪ್ಪಿರುತ್ತಾರೆ. ಅವುಗಳನ್ನು ನಿ ಡಿ 1 ಮತ್ತು 2 ಎಂದು ಗುರುತಿಸಲಾಯಿತು. ಸಾಕ್ಷಿಗೆ ಇನ್ನೊಂದು ಭಾವಚಿತ್ರವನ್ನು ತೋರಿಸಿದ್ದು ಅದರಲ್ಲಿ ಕಂಡುಬರುವ ರಸ್ತೆಯ ಎರಡೂ ಪಕ್ಕದ ಜಾಗಗಳು ನನ್ನದು ಮತ್ತ ಪ್ರತಿವಾದಿಯದ್ದು ಎಂದು ಒಪ್ಪಿರುತ್ತಾರೆ. ಅವುಗಳನ್ನು ನಿ ಡಿ 3 ಎಂದು ಗುರುತಿಸಲಾಯಿತು. ನಮ್ಮ ಹಾಗೂ ಪ್ರತಿವಾದಿ ಜಮೀನಿನ ನಡುವೆ ಕಂಡುಬರುವ ರಸ್ತೆಯು ಸುಮಾರು ವರ್ಷಗಳಿಂದ ಅಸ್ತಿತ್ವದಲ್ಲಿರುವ ರಸ್ತೆಯಾಗಿದ್ದು ನನ್ನ ಜಮೀನಿಗೆ ಬೇಲಿ ಹಾಕಿದ್ದರೂ ಸಹ ದಾರಿಯಲ್ಲಿ ಹೋಗುವ ಸಾರ್ವಜನಿಕರಿಗೆ ತೊಂದರೆ ನೀಡಲು ಈ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳ ಜಮೀನ ಪಶ್ಚಿಮಕ್ಕೆ ರಸ್ತ್ತ ಬರುತ್ತದೆ ಎಂದರೆ ಸರಿಯಲ್ಲ. ಬಿ ಅನುಸೂಚಿತ ಆಸ್ತಿಯಲ್ಲಿ ಪ್ರತಿವಾದಿಗಳು 50-60 ವರ್ಷಗಳಿಂದ ಅವರು ಈಗಾಗಲೇ ಪ್ರತಿಕೂಲ ಸ್ವಾಧಿನ ಹಕ್ಕನ್ನು ಸಾದಿಸಿರುವ ಕಾರಣ ನಾನು ಬಿ ಅನುಸೂಚಿತ ಆಸ್ತಿಯಲ್ಲಿ ಹಕ್ಕು ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ನಂಜನಗೂಡು.